# ಸ್ತೋತ್ರ ಸಂಗ್ರಹ

## ಶ್ರೀರಾಘವೇಂದ್ರ ಮಂಗಲಾಷ್ಟಕಮ್

ಶ್ರೀಮದ್ರಾಮಪದಾರವಿಂದಮಧುಪಃ ಶ್ರೀಮಧ್ವವಂಶಾಧಿಪಃ
ಸಚ್ಛಿಷ್ಯೋಡುಗಣೋಡುಪಃ ಶ್ರಿತಜಗದ್ಗೀರ್ವಾಣಸತ್ಪಾದಪಃ|
ಅತ್ಯರ್ಥಂ ಮನಸಾ ಕೃತಾಚ್ಯುತಜಪಃ ಪಾಪಾಂಧಕಾರಾತಪಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧೃವಂ ಮಂಗಲಮ್||೧||

ಶ್ರೀರಾಮದೇವರ ಪಾದಾರವಿಂದಗಳಲ್ಲಿ ದುಂಬಿಯಂತಿರುವ,ಶ್ರೀಮಧ್ವಾಚಾರ್ಯರ ಪರಮಹಂಸವಂಶಕ್ಕೆ ಅಧಿಪತಿಗಳಂತಿರುವ,ಸಚ್ಛಿಷ್ಯರೆಂಬ ನಕ್ಷತ್ರಸಮೂಹಕ್ಕೆ ಚಂದ್ರನಂತಿರುವ,ಆಶ್ರಿತರಿಗೆ ಕಲ್ಪವೃಕ್ಷದಂತಿರುವ,ಅತ್ಯರ್ಥಪ್ರಸಾದಕ್ಕಾಗಿ ಸದಾಕಾಲವೂ ಮನಸ್ಸಿನಲ್ಲಿ ಶ್ರೀಮನ್ನಾರಾಯಣನ ಜಪಮಾಡುತ್ತಿರುವ,ಮತ್ತು ಪಾಪವೆಂಬ ಕತ್ತಲೆಗೆ ಸೂರ್ಯನಂತಿರುವ ಸದ್ಗುರುಗಳಾದ ಶ್ರೀರಾಘವೇಂದ್ರಯತಿರಾಜರು ನಮಗೆ ಯಾವಾಗಲೂ ಮಂಗಳವನ್ನುಂಟುಮಾಡಲಿ.

ಕರ್ಮಂದೀಂದ್ರಸುಧೀಂದ್ರಸದ್ಗುರುಕರಾಂಭೋಜೋದ್ಭವ ಸಂತತಂ
ಪ್ರಾಜ್ಯಧಾನವಶೀಕೃತಾಖಿಲಜಗದ್ವಾಸ್ತವ್ಯಲಕ್ಷ್ಮೀಧವಃ|
ಸಚ್ಛಾಸ್ತ್ರಾತಿವಿದೂಷಕಾಖಿಲಮೃಷಾವಾದೀಭಕಂಠೀರವಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧೃವಂ ಮಂಗಲಮ್||೨||

ಯತಿಗಳಿಗೆ ಪ್ರಭುಗಳಾದ ಶ್ರೀಸುಧೀಂದ್ರತೀರ್ಥರೆಂಬ ಸದ್ಗುರುಗಳ ಕರಕಮಲಸಂಜಾತರಾದ, ನಿರಂತರವೂ ಹೆಚ್ಚುತ್ತಿರುವ ಧ್ಯಾನಾದಿಗಳಿಂದ ಸಕಲ ಜಗತ್ತಿನಲ್ಲಿಯೂ ವ್ಯಾಪ್ತನಾದ ಶ್ರೀಲಕ್ಷ್ಮೀಪತಿಯನ್ನು ವಶಪಡಿಸಿಕೊಂಡಿರುವ,ಸಚ್ಛಾಸ್ತ್ರವನ್ನು ವಿಶೇಷವಾಗಿ ದೂಷಿಸುವ ಮಾಯಾವಾದಿಗಳೆಂಬ ಸಕಲ ಮದಗಜಗಳಿಗೆ ಸಿಂಹದಂತಿರುವ ಶ್ರೀ ರಾಘವೇಂದ್ರಗುರುಗಳು ನಮಗೆ ಮಂಗಳವನ್ನುಂಟುಮಾಡಲಿ.

ಸಾಲಂಕಾರಕಕಾವ್ಯನಾಟಕಕಲಾಕಾಣಾದಪಾತಂಜಲ
ತ್ರಯ್ಯರ್ಥಸ್ಮೃತಿಜೈಮಿನೀಯಕವಿತಾಸಂಗೀತಪಾರಂಗತಃ|
ವಿಪ್ರಕ್ಷತ್ರವಿಡಂಘ್ರಿಜಾತಮುಖರಾನೇಕಪ್ರಜಾಸೇವಿತಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧೃವಂ ಮಂಗಲಮ್||೩||

ಅಲಂಕಾರಸಹಿತವಾದ ಕಾವ್ಯ, ನಾಟಕ ,ಕಲೆಗಳು,ಕಾಣಾದ ಮತ್ತು ಪಾತಂಜಲ ಎಂದು ಪ್ರಸಿದ್ಧವಾದ ನ್ಯಾಯ ಮತ್ತು ವ್ಯಾಕರಣಶಾಸ್ತ್ರಗಳು,ವೇದತ್ರಯ ಮತ್ತು ತದನುಸಾರಿ ಸ್ಮೃತಿಗಳು,ಜೈಮಿನೀಯ ಪೂರ್ವಮೀಮಾಂಸಶಾಸ್ತ್ರ, ಕವಿತೆ,ಸಂಗೀತ ಮುಂತಾದವುಗಳಲ್ಲಿ ಆಳವಾದ ಜ್ಞಾನಹೊಂದಿರುವ ಬ್ರಾಹ್ಮಣ,ಕ್ಷತ್ರಿಯ,ವೈಶ್ಯ ಮತ್ತು ಶೂದ್ರ ಮುಂತಾದ ಅನೇಕ ರೀತಿಯ ಜನರಿಂದ ಸೇವಿತರಾದ ಶ್ರೀರಾಘವೇಂದ್ರ ಗುರುಗಳು ನಮಗೆ ಶಾಶ್ವತವಾದ ಮಂಗಳವನ್ನುಂಟುಮಾಡಲಿ.

ರಂಗೋತ್ತುಂಗತರಂಗಮಂಗಳಕರಶ್ರೀತುಂಗಭದ್ರಾತಟ–
ಪ್ರತ್ಯಸ್ಥದ್ವಿಜಪುಂಗವಾಲಯಲಸನ್ ಮಂತ್ರಾಲಯಾಖ್ಯೇಪುರೇ|
ನವ್ಯೇಂದ್ರೋಪನೀಲಭವ್ಯಕರಸದ್ಬೃಂದಾವನಾಂತರ್ಗತಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧೃವಂ ಮಂಗಲಮ್||೪||

ರಂಗುರಂಗಿನ ಉನ್ನತವಾದ ಅಲೆಗಳಿಂದ ರಾಜಿಸುವ ಮಂಗಳಕರವಾದ ಶ್ರೀತುಂಗಭದ್ರಾನದಿಯ ದಡದಲ್ಲಿರುವ ಬ್ರಾಹ್ಮಣರ ಮನೆಗಳಿಂದ ಶೋಭಿಸುವ ಮಂತ್ರಾಲಯ ಕ್ಷೇತ್ರದಲ್ಲಿ ನೂತನವಾದ ಇಂದ್ರನೀಲಮಣಿಯಂತೆ ಭವ್ಯವಾದ ಶ್ರೇಷ್ಠವಾದ ಬೃಂದಾವನದಲ್ಲಿ ಸನ್ನಿಹಿತರಾಗಿರುವ ಶ್ರೀರಾಘವೇಂದ್ರಗುರುಗಳು ನಮಗೆ ಶಾಶ್ವತ ಮಂಗಳವನ್ನು ನೀಡಲಿ.

ವಿದ್ವದ್ರಾಜಶಿರಃಕಿರೀಟಖಚಿತಾನರ್ಘ್ಯೋರುರತ್ನಪ್ರಭಾ-
ರಾಗಾಘೌಘಹಪಾದುಕಾದ್ವಯಚರಃ ಪದ್ಮಾಕ್ಷಮಾಲಾಧರಃ|
ಭಾಸ್ವದ್ದಂಡಕಮಂಡಲೋಜ್ವಲಕರಃ ರಕ್ತಾಂಬರಾಡಂಬರಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಮ್||೫||

ಪಂಡಿತರ ಮತ್ತು ರಾಜರುಗಳ ಶಿರಸ್ಸಿನಲ್ಲಿ ಶೋಭಿಸುವ ಕಿರೀಟಗಳಲ್ಲಿ ಕೆತ್ತಿದ ಅಮೂಲ್ಯವಾದ ಶ್ರೇಷ್ಠವಾದ ರತ್ನಗಳ ಕಾಂತಿಯಿಂದ ತೋರುವ ರಾಗಾದಿ ಪಾಪಸಮೂಹವನ್ನು ಪರಿಹರಿಸುವಂಥಹ ಪಾದುಕೆಗಳನ್ನು ಧರಿಸಿರುವ,ಪದ್ಮಾಕ್ಷಮಾಲೆಯನ್ನು ಧರಿಸಿ ಹೊಳೆಯುವ ದಂಡ ಕಮಂಡಲುಗಳನ್ನು ಕರದಲ್ಲಿ ಹಿಡಿದುಕೊಂಡು ಕಾಷಾಯವಸ್ತ್ರ ಧಾರಣೆಯಿಂದ ಕಾಂತಿಸಂಪನ್ನರಾದ ಶ್ರೀರಾಘವೇಂದ್ರಗುರುಗಳು ನಮಗೆ ಶಾಶ್ವತ ಮಂಗಳವನ್ನುಂಟುಮಾಡಲಿ.

ಯದ್ಬೃಂದಾವನಸಪ್ರದಕ್ಷಿಣನಮಸ್ಕಾರಾಭಿಷೇಕಸ್ತುತಿ-
ಧ್ಯಾನಾರಾಧನ ಮೃದ್ವಿಲೇಪನಮುಖಾನೇಕೋಪಚಾರಾನ್ ಸದಾ
ಕಾರಂಕಾರಮಭಿಪ್ರಯಾಂತಿ ಚತುರೋ ಲೋಕಾಃ ಪುಮರ್ಥಾನ್ ಸದಾ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಮ್||೬||

ಯಾರ ಬೃಂದಾವನಕ್ಕೆ ಪ್ರದಕ್ಷಿಣೆ ಸಹಿತ ನಮಸ್ಕಾರ,ಪಂಚಾಮೃತಾದಿ ಅಭಿಷೇಕ,ಸ್ತೋತ್ರಪಠನ,ಧ್ಯಾನ,ಆರಾಧನಾ,ದೇಹಕ್ಕೆ ಮೃತ್ತಿಕಾಲೇಪನ ಇವೇಮೊದಲಾದ ಸೇವೆಗಳನ್ನು ಯಾವಾಗಲೂ ಮಾಡುವುದರಿಂದ ಎಲ್ಲ ವರ್ಗದವರೂ ಸದಾ ಎಲ್ಲ ಪುರುಷಾರ್ಥಗಳನ್ನು ಹೊಂದುವರೋ ಅಂಥಹ ಗುರುಗಳು ನಮಗೆ ಶಾಶ್ವತವಾದ ಮಂಗಳವನ್ನುಂಟುಮಾಡಲಿ.

ವೇದವ್ಯಾಸಮುನೀಮಧ್ವಯತಿರಾಟ್ ಟೀಕಾರ್ಯವಾಕ್ಯಾಮೃತಂ
ಜ್ಞಾತ್ವಾಽದ್ವೈತಮತಂ ಹಲಾಹಲಸಮಂ ತ್ಯಕ್ತ್ವಾ ಸಮಾಖ್ಯಾಪ್ತಯೇ|
ಸಂಖ್ಯಾವತ್ಸುಖದಾಂ ದಶೋಪನಿಷದಾಂ ವ್ಯಾಖ್ಯಾಂ ಸಮಾಖ್ಯನ್ಮುದಾ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಮ್||೭||

ಮುನಿಶ್ರೇಷ್ಠರಾದ ಶ್ರೀವೇದವ್ಯಾಸದೇವರು,ಯತಿರಾಜ ಶ್ರೀ ಮಧ್ವಾಚಾರ್ಯರು,ಟೀಕಾಚಾರ್ಯರಾದ ಶ್ರೀಜಯತೀರ್ಥರು ಮೊದಲಾದವರ ವಾಕ್ಯಾಮೃತವನ್ನು ತಿಳಿದು,ವಿಷಕ್ಕೆ ಸಮನಾದ ಅದ್ವೈತಮತವನ್ನು ತ್ಯಜಿಸಿ,ಜ್ಞಾನಿಗಳಿಗೆ ಸುಖಪ್ರದವಾದ ದಶೋಪನಿಷತ್ತುಗಳಿಗೆ ಸಮಾಖ್ಯಾರೂಪದ ಪ್ರಮಾಣವನ್ನು ತೋರಿಸಲು ಆನಂದದಿಂದ ವ್ಯಾಖ್ಯಾನವನ್ನು ಮಾಡಿರುವ ಶ್ರೀ ರಾಘವೇಂದ್ರಗುರುಗಳು ನಮಗೆ ಶಾಶ್ವತವಾದ ಮಂಗಳವನ್ನುಂಟುಮಾಡಲಿ.

ಶ್ರೀಮದ್ವೈಷ್ಣವಲೋಕಜಾಲಕಗುರುಃ ಶ್ರೀಮತ್ಪರಿವ್ರಾಡ್ಗುರುಃ
ಶಾಸ್ತ್ರೇ ದೇವಗುರುಃ ಶ್ರಿತಾಮರತರುಃ ಪ್ರತ್ಯೂಹಗೋತ್ರಸ್ವರುಃ|
ಚೇತೋಽತೀತಶಿರುಸ್ತಥಾ ಜಿತವರುಃ ಸತ್ಸೌಖ್ಯಸಂಪತ್ಕರುಃ
ಶ್ರೀಮತ್ಸದ್ಗುರುರಾಘವೇಂದ್ರಯತಿರಾಟ್ ಕುರ್ಯಾದ್ಧ್ರುವಂ ಮಂಗಲಮ್||೮||

ಸಾತ್ವಿಕವಾದ ಸಂಪದ್ಭರಿತರಾದ ವೈಷ್ಣವಸಮುದಾಯಕ್ಕೆ ಗುರುಗಳಾದ,ಪರಮಹಂಸಕುಲಕ್ಕೆ ಚಕ್ರವರ್ತಿಯಂತಿರುವ,ಶಾಸ್ತ್ರವಿಚಾರದಲ್ಲಿ ದೇ

ವಗುರುಗಳಾದ ಬೃಹಸ್ಪತ್ಯಾಚಾರ್ಯರಂತಿರುವ,ಆಶ್ರಿತರಿಗೆ ಕಲ್ಪವೃಕ್ಷದಂತೆ ಮತ್ತುವಿಘ್ನಗಳೆಂಬ ಪರ್ವತಗಳಿಗೆ ವಜ್ರಾಯುಧದಂತಿರುವ,ಮನಸ್ಸನ್ನು ಅಂದರೆ ಕಾಮವನ್ನು ಗೆದ್ದಿರುವ,ಯೋಗ್ಯವಾದ ಸುಖಸಂಪತ್ತುಗಳನ್ನು ನೀಡುವ ಶ್ರೀರಾಘವೇಂದ್ರಗುರುಗಳು ನಮಗೆ ಮಂಗಳವನ್ನು ನೀಡಲಿ.

ಯಃ ಸಂಧ್ಯಾಸ್ವನಿಶಂ ಗುರೋರ್ವ್ರತಿಪತೇಃ ಸನ್ಮಂಗಲಸ್ಯಾಷ್ಟಕಂ  
ಸದ್ಯಃ ಪಾಪಹರಂ ಸ್ವಸೇವಿವಿದುಷಾಂ ಭಕ್ತ್ಯೈವ ಬಾಭಾಷಿತಂ|  
ಭಕ್ತ್ಯಾ ವಕ್ತಿ ಸುಸಂಪದಂ ಶುಭಪದಂ ದೀರ್ಘಾಯುರಾರೋಗ್ಯಕಂ  
ಕೀರ್ತಿಂ ಪುತ್ರಕಳತ್ರಬಾಂಧವಸುಹೃನ್ಮೂರ್ತೀಃ ಪ್ರಯಾತಿ ಧ್ರುವಮ್||೯॥

ಯಾವ ಭಕ್ತರು ಮತ್ತು ಪಂಡಿತರು ಯತಿಶ್ರೇಷ್ಠರಾದ ಶ್ರೀಗುರುರಾಜರ ಈ ಉತ್ತಮವಾದ ಮಂಗಲಾಷ್ಟಕವನ್ನು ಪ್ರತಿನಿತ್ಯವೂ ಮೂರು ಸಂಧ್ಯಾಕಾಲಗಳಲ್ಲಿಯೂ ಭಕ್ತಿಯಿಂದ ಹೇಳುತ್ತಾರೋ ಅವರ ಪಾಪಗಳು ತತ್ಕ್ಷಣವೇ ನಾಶವಾಗುತ್ತವೆ.ಭಕ್ತಿಯಿಂದ ಪಠಿಸುವುದರಿಂದ ಧ್ರುವವಾದ ಮತ್ತು ಸಮೀಚೀನವಾದ ಸಂಪತ್ತು,ಮಂಗಳಕರ ಪದವಿ,ದೀರ್ಘಾಯಸ್ಸು, ಆರೋಗ್ಯ,ಕೀರ್ತಿ,ಯೋಗ್ಯರಾದ ಹೆಂಡತಿ ಮಕ್ಕಳು, ಬಂಧುಗಳು ಮತ್ತು ಸ್ನೇಹಿತರು ಪ್ರಾಪ್ತಿಯಾಗುತ್ತಾರೆ.ಇದು ನಿಶ್ಚಿತ.

||ಇತಿ ಶ್ರೀಮದಪ್ಪಣಾಚಾರ್ಯಕೃತಂ ಶ್ರೀ ರಾಘವೇಂದ್ರ ಮಂಗಲಾಷ್ಟಕಮ್||

**ಆಧಾರ:ಶ್ರೀ ರಾಘವೇಂದ್ರಸ್ತೋತ್ರಮಾಲಾ(ಕನ್ನಡ ಭಾವಾನುವಾದ ಸಹಿತ).....ಶ್ರೀ ಪ್ರೊ||ಎಸ್.ವೆಂಕಟೇಶಮೂರ್ತಿ.**